ಅ) ಅವರ ಬೇಡಿಕೆಯನ್ನು ಅನುಸರಿಸಿ ಕಾಲೇಜು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಖಾಸಗಿಯವರಿಂದ ಕಾಲೇಜು ಸ್ಥಾಪಿಸುವ ಬಗ್ಗೆ ಅರ್ಜಿಗಳು ಬಂದಿವೆಯೇ ? ಹಾಗಿದ್ದಲ್ಲಿ ಯಾವ ಯಾವ ಸಂಸ್ಥೆಗಳಿಂದ ಅರ್ಜಿಗಳು ಬಂದಿವೆ ? (ವಿವರ ನೀಡುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಯಾವ ಶಾಸನಸಭಾ ಸದಸ್ಯರಿಂದಲೂ ಈ ಬಗ್ಗೆ ಮನವಿಗಳು ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಕೆಳಕಂಡ ಖಾಸಗಿ ಸಂಸ್ಥೆಗಳಿಂದ ಶಿವಮೊಗ್ಗದಲ್ಲಿ ವೈದ್ಯಕೀಯ ವಿದ್ಯಾಲಯ ಸ್ಥಾಪಿಸಲು ಅರ್ಜಿಗಳು ಬಂದಿವೆ.

೧) ನ್ಯಾಷನಲ್ ಎಜುಕೇಷನ್ ಸೊಸೈಟಿ, ಶಿವಮೊಗ್ಗ

೨) ಸಹ್ಯಾದ್ರಿ ಎಜುಕೇಷನ್ ಸೊಸೈಟಿ, ಶಿವಮೊಗ್ಗ

೩) ಆಲ್ ಮಹಮ್ಮದ್ ಎಜುಕೇಷನ್ ಸೊಸೈಟಿ, ಭದ್ರಾವತಿ.

೪) ಚಿನ್ಮೂಲಾದ್ರಿ ಬೃಹನಠ, ಚಿತ್ರದುರ್ಗ.

೫) ಡಾ॥ ಬಿ. ಆರ್. ಅಂಬೇಡ್ಕರ್ ಮಿಷನ್ ಶಿವಮೊಗ್ಗ.

೬) ಡಾ॥ ರಾಮ ಮನೋಹರ ಲೋಹಿಯಾ ಸಂಸ್ಥೆ ಶಿವಮೊಗ್ಗ.

ಸವಳೇಶ್ವರ ನೀರಾವರಿ ಕೆರೆ ನಿರ್ಮಾಣ

೩೭೮ (೭೪೧) ಶ್ರೀ ಶರಣಬಸಪ್ಪ ಮೂಲಪಾಟೀಲ್ (ಆಳಂದ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :-

ಅ) ಆಳಂದ್ ತಾಲ್ಲೂಕಿನ ಸವಳೇಶ್ವರ ನೀರಾವರಿ ಕೆರೆಯನ್ನು ನಿರ್ಮಿಸುವ ಬಗ್ಗೆ ೧೯೮೫–೮೬ರ ಆಂದಾಜು ಪಟ್ಟಿಯಲ್ಲಿ ಸೇರಿಸಲಾಗಿದ್ದುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ, ಈವರೆಗೂ ಸದರಿ ಕೆರೆಯು ನಿರ್ಮಾಣವಾಗದಿರುವುದಕ್ಕೆ ಕಾರಣವೇನು ?

ಇ) ಈ ವರ್ಷದ ಆಂದಾಜು ಪಟ್ಟಿಯಲ್ಲಾದರೂ ಇದನ್ನು ಸೇರಿಸಿ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಯವರು).—

ಅ) ಇಲ್ಲ. ೧೯೮೬–೮೭ರ ಆಯವ್ಯಯದಲ್ಲಿ ಸೇರಿಸಲಾಗಿತ್ತು.

ಆ) ಕೆರೆಯ ಸರ್ವೆ ಕೆಲಸಕ್ಕೆ ಗ್ರಾಮಸ್ಥರು ಅಡ್ಡಿಪಡಿಸಿದ್ದರಿಂದ ಸವಿಾಕ್ಷಣೆ ನಡೆಸಲಾಗಲಿಲ್ಲ.

ಇ) ಕೆರೆಯ ಸರ್ವೆ ಕೆಲಸಕ್ಕೆ ಗ್ರಾಮಸ್ಥರು ಅವಕಾಶ ಮಾಡಿಕೊಟ್ಟಲ್ಲಿ ಸವಿಾಕ್ಷಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಕೊಲೆ ಸುಲಿಗೆ ದರೋಡೆ ಆಗುತ್ತಿರುವ ಬಗ್ಗೆ

೩೭೯ (೭೫೫) ಶ್ರೀ ಕೆ. ವಸಂತಬಂಗೇರರವರ (ಬೆಳ್ತಂಗಡಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಇತ್ತೀಚೆಗೆ ಕೊಲೆ, ಸುಲಿಗೆ ದರೋಡೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?